# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 05(ಜಕ್ಕೂರು)
## ವಾರ್ಡ್‌ಸಮಿತಿ ಸಭೆ, ದಿನಾಂಕ: 21.11.2020 ರ
## ಸಭಾ ನಡುವಳಿ

ದಿನಾಂಕ: 21.11.2020 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.05 ಜಕ್ಕೂರು ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಯಕ ಕಾರ್ಯಪಾಲಕ ಅಭಿಯಂತರರು. ಬ್ಯಾಟರಾಯನಪುರ ಉಪ ವಿಭಾಗ ಕಛೇರಿ, ದಾಸರಹಳ್ಳಿ, ಇಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಜಿ ದೇವರಾಜ್ | ನೋಡಲ್ ಅಧಿಕಾರಿ, ವಾರ್ಡ್ ನಂ. 05(ಜಕ್ಕೂರು) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ) |
| 2 | ಶ್ರೀ ಬೈರೇಶ್ | ಸಹಾಯಕ ಅಭಿಯಂತರರು ಕೆರೆಗಳ ವಿಭಾಗ, ಯಲಹಂಕ ವಲಯ |
| 3 | ಶ್ರೀ ಕೆ.ಬಿ ಬಸವರಾಜು | ಸಹಾಯಕ ಅಭಿಯಂತರರು |
| 4 | ಶ್ರೀ ಶ್ರೀನಿವಾಸಮೂರ್ತಿ | ವಿದ್ಯುತ್ ವಿಭಾಗ |
| 5 | ಶ್ರೀ ಜಿ. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 05 |
| 6 | ಶ್ರೀ ಅಶ್ವಥ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 05 |
| 7 | ಆರ್.ಜೆ ಸೋಮಶೇಖರ್ | ವ್ಯವಸ್ಥಾಪಕರು, ಕಂದಾಯ ಶಾಖೆ, ಫಣಿಸಂದ್ರ |

ಶ್ರೀ ವೈ.ಎನ್ ಮಹಂತೇಶ್ ಕುಮಾರ್ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳು, ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಈ ಹಿಂದೆ ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ತೆಗೆದು ಕೊಂಡ ಕ್ರಮಗಳ ಬಗ್ಗೆ ವಿವರಿಸುತ್ತಾ ಸದರಿ ಸಭೆಯ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್-19ರ ಸಂಬಂಧ ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಜಾಗ್ರತ ಕ್ರಮಗಳ ಬಗ್ಗೆ**.: ವಾರ್ಡ್ ನಂ. 05ರ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ವೆಂಕಟೇಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿರುವುದರಿಂದ ಸಾರ್ವಜನಿಕರು



Scanned by CamScanner

ಮಾಸ್ಕ್ ಧರಿಸದೇ ಹಾಗೂ ಸಾಮಾಜಿಕ ಅಂತರ ಕಾಪಾಡದೇ ಓಡಾಡುತ್ತಿರುವುದು ಕಂಡು ಬಂಧಿರುತ್ತದೆ ಆದುದರಿಂದ ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸಲು ಕ್ರಮ ವಹಿಸಿಕೊಳ್ಳಬೇಕೆಂದು ಕೊರಿದರು.
ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಾಧ್ಯಮಗಳ ಮೂಲಕ ಹಾಗೂ ಕರ ಪತ್ರಗಳನ್ನು ಮುದ್ರಿಸಿ ಪ್ರಚಾರ ಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.
ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾರ್ಷಲ್‌ಗಳು ಹೆಚ್ಚಿನ ರೀತಿಯಲ್ಲಿ ಮಾಸ್ಕ್ ಇಲ್ಲದೇ ಓಡಾಡುವವರ ಮೇಲೆ ದಂಡ ವಿಧಿಸಿ ಸಾರ್ವಜನಿಕರಿಗೆ ಈ ಬಗ್ಗೆ ಎಚ್ಚರಿಕೆ ನೀಡಲು ಸೂಚಿಸಲು ತಿಳಿಸಲಾಯಿತು.

2. ಸದಸ್ಯ ಕಾರ್ಯದರ್ಶಿಯವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಕಟ್ಟಿಗೇನಹಳ್ಳಿಯಲ್ಲಿ ಗ್ರಾಮ ಪಂಚಾಯ್ತಿಯ ಕಾಲದಲ್ಲಿ ನಿರ್ಮಾಣಗೊಂಡಿರುವ ಓವರ್‌ಹೆಡ್ ಟ್ಯಾಂಕ್ ಶಿಥಿಲಗೊಂಡಿದ್ದು ಬೀಳುವ ಸ್ಥಿತಿಯಲ್ಲಿರುತ್ತದೆ ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಶಿಥಿಲಗೊಂಡಿರುವ ಓವರ್‌ಹೆಡ್ ಟ್ಯಾಂಕ್‌ಅನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಸಭೆಯಲ್ಲಿ ತಿಳಿಸಿದರು ಈ ಬಗ್ಗೆ ಒಮ್ಮತದಿಂದ ಓವರ್‌ಹೆಡ್ ಟ್ಯಾಂಕ್‌ಅನ್ನು ತೆರವುಗೊಳಿಸಲು ತೀರ್ಮಾನ ಕೈಗೊಳ್ಳಲಾಯಿತು.

3. ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಅಶ್ವಥ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಒಣ ತ್ಯಾಜ್ಯ ವಿಲೇವಾರಿ ಬಗ್ಗೆ ಹೆಚ್ಚಿನ ದೂರುಗಳು ಬರುತ್ತಿದ್ದು, ಹೆಚ್ಚುವರಿಯಾಗಿ 4 ವಾಹನಗಳನ್ನು ಒದಗಿಸುವಂಥೆ ಕೋರಿದರು ಇದರ ಬಗ್ಗೆ ನೊಡೆಲ್ ಅಧಿಕಾರಿಯವರು ಈ ಬಗ್ಗೆ ಸ.ಕಾ.ಅ ಘನತ್ಯಾಜ್ಯ ರವರೊಂದಿಗೆ ದೂರವಾಣಿಯ ಮುಖಾಂತರ ಮಾತನಾಡಿ ಈ ಬಗ್ಗೆ ಕೂಡಲೇ ಕ್ರಮ ವಹಿಸುವಂಥೆ ಸೂಚಿಸಿದರು.
4. ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಟೆಲಿಕಾಂ ಬಡಾವಣೆ ನಿವಾಸಿ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಟೆಲಿಕಾಂ ಬಡಾವಣೆಯಲ್ಲಿ ವಿದ್ಯುತ್ ಕಂಬಗಳಲ್ಲಿ ಬಲ್ಬ್‌ಗಳು ಹಾಳಾಗಿದ್ದು ಕೂಡಲೇ ಹೊಸದಾಗಿ ಬಲ್ಬ್‌ಗಳನ್ನು ಅಳವಡಿಸುವಂಥೆ ಕೋರಿದರು ಈ ಬಗ್ಗೆ ನೊಡೆಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಶ್ರೀ ಶ್ರೀನಿವಾಸ್ ವಿದ್ಯುತ್ ವಿಭಾಗದ ಅಧಿಕಾರಿಯವರಿಗೆ ಕ್ರಮ ವಹಿಸುವಂಥೆ ಸೂಚಿಸಿದರು.
5. ಟೆಲಿಕಾಂ ಬಡಾವಣೆಯ ಸಂಸ್ಥೆಯ ಪದಾದಿಕಾರಿಗಳಾದ ಶ್ರೀ ರಾಜೇಂದ್ರ ಹೆಗಡೆ ರವರು ಮಾತನಾಡಿ ಟೆಲಿಕಾಂ ಬಡಾವಣೆಯ 11ನೇ ಅಡ್ಡರಸ್ತೆಯಲ್ಲಿರುವ ಉದ್ಯಾನವನದಲ್ಲಿ ಕಸ ಹಾಕುತ್ತಿದ್ದು ಅದನ್ನು ತಡೆಯಲು ಕ್ರಮ ವಹಿಸುವಂತೆ ಕೋರಿದರು ಇದಕ್ಕೆ ತೋಟಗಾರಿಕೆ ಅಧೀಕ್ಷಕರು ಬ್ಯಾಟರಾಯನಪುರ ವಿಭಾಗ ರವರಿಗೆ ದೂರವಾಣಿ ಕರೆ ಮೂಲಕ ಮಾತನಾಡಿ ಕ್ರಮ ವಹಿಸುವಂತೆ ಸೂಚಿಸಲಾಯಿತು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಸಂಬಂಧಪಟ್ಟ ಎಲ್ಲಾ ಇಲಾಖೆಯ



Scanned by CamScanner

ಅಧಿಕಾರಿಗಳು ಕ್ರಮ ವಹಿಸುವಂಥೆ ಸೂಚಿಸಿದರು ಹಾಗೂ ಕೋವಿಡ್-19ರ ಸಂಬಂಧ ಮೇಲಾಧಿಕಾರಿಗಳಿಂದ ಬರುವ ಸೂಚನೆ ಮತ್ತು ಆದೇಶಗಳನ್ನು ನಿಯಮಾನುಸಾರ ಪಾಲಿಸುವಂಥೆ ಹಾಗೂ ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/11/20

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 05(ಜಕ್ಕೂರು)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 05, (ಜಕ್ಕೂರು)
21/11/2020

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.



Scanned by CamScanner